ಈ ಎರಡು ಕಾಲುವೆಯವರು ಭತ್ತ ಬೆಳೆಯುವುದರಿಂದ, ಈ ಟೇಲ್‌ಯೆಂಡ್‌ನಲ್ಲಿರತಕ್ಕಂತವರಿಗೆ ಪ್ರಾಬ್ಲಮ್ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಮೇಲುಗಡೆಯಲ್ಲಿ ಭತ್ತ ಬೆಳೆಯತಕ್ಕವರು ಹೆಚ್ಚು ನೀರನ್ನು ಉಪಯೋಗಿಸಿಕೊಳ್ಳುವುದರಿಂದ ಕೆಳಗಡೆ ಟೇಲ್‌ಯೆಂಡ್‌ನಲ್ಲಿರತಕ್ಕವರಿಗೆ ನೀರು ಕಡಿಮೆ ಯಾಗತಕ್ಕದ್ದು ಸ್ವಾಭಾವಿಕ. ಆ ನದಿಯಲ್ಲಿಯೂ ಕೂಡ ಈ ಸಾರಿ ಮಳೆ ಆಗದೆ ಇರುವುದರಿಂವ ಸ್ವಲ್ಪ ತೊಂದರೆಯಾಗಿದೆ. ಈಗ ಮಾನ್ಯ ಸದಸ್ಯರು ಏನು ಸಮಸ್ಯೆಗಳನ್ನು ಹೇಳಿದ್ದೀರಿ, ಶಾಶ್ವತವಾಗಿ ಏನಾದರೂ ಇದಕ್ಕೆ ಪರಿಹಾರ ಮಾಡಬೇಕೆಂದು ಏನು ಹೇಳಿದ್ದೀರಿ ಅದರ ಬಗ್ಗೆ ನಾನು ಮುಖ್ಯ ಮಂತ್ರಿಗಳ ಜೊತೆ ಪ್ರಸ್ತಾಪ ಮಾಡಿ ತಿಳಿಸಿದ್ದೇನೆ. ಈಗ ನಾವು ಸರ್ಕಾರದವರು ಇದಕ್ಕೆ ಸಂಬಂಧ ಪಟ್ಟಂತೆ ಈ ಕಟ್ಟೆಪುರ ಅಣೆಕಟ್ಟು ಹೆಚ್ಚಿಗೆ ಮಾಡಬೇಕಂ, ಅದನ್ನು ಹೆಚ್ಚಿಗೆ ಮಾಡಿದಾಗ ನಮ್ಮ ಈ ನೀರಾವರಿ ಪ್ರದೇಶ ಹೆಚ್ಚು ಮಾಡಲಿಕ್ಕೆ ಸಾಧ್ಯ. ನಮ್ಮ ಇಲಾಖೆಯಂ ವತಿಯಿಂದ ಹೇಳುವುದಾದರೆ, ನೂರಾರು ವರ್ಷದ ಹಿಂದೆ ಕಟ್ಟಿರತಕ್ಕಂಥ ಅಣೆಕಟ್ಟು ಅದು ಭದ್ರವಾಗಿರತಕ್ಕಂಥ ಅಣೆಕಟ್ಟು ಅದನ್ನು ನಾವು ಸ್ವಲ್ಪವಷ್ಟಿಗೆ ಏನಾದರೂ ದುರಸ್ತಿ ಮಾಡಲಿಕ್ಕೆ ಹೋದರೆ ಬಹುಶಃ ಮತ್ತೆ ಅಂಥ ಅಣೆಕಟ್ಟು ಕಟ್ಟಲಿಕ್ಕೆ ಆಗುತ್ತದೆಯೋ ಇಲ್ಲವೋ, ಮತ್ತೆ ಗಂಡಾಂತರವಾಗುತ್ತದೆ ಅಂತ ಭಯ. ಆದರೂ ಕೂಡ ನಮ್ಮ ಚೀಫ್ ಇಂಜಿನಿಯರ್ ಮತ್ತು ಎಲ್ಲಾ ಇಲಾಖಾ ಅಧಿಕಾರಿಗಳನ್ನು ಸ್ವಲ್ಪ ದಿವಸದಲ್ಲಿಯೇ ಅಲ್ಲಿಗೆ ಕಳುಹಿಸಿ ಅದನ್ನು ಪೂರ್ತಿ ವಿಚಾರ ಮಾಡಿಸಿ ತನಿಖೆ ಮಾಡಿಸಿ, ಅವರು ವರದಿ ಸಲ್ಲಿಸಿದ ನಂತರ ನಾನು ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ ಸಂಬಂಧಪಟ್ಟಿರತಕ್ಕದ್ದು ಮಾಡಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೆ, ನಾನು ಮೊನ್ನೆಯ ದಿವಸ ಕೃಷ್ಣ ಮೇಲ್ದಂಡೆ ವಿಚಾರದಲ್ಲಿ ಸಂಮಾರು ಎರಡು ಲಕ್ಷ ಸಿಮೆಂಟ್ ಮೂಟೆ ನಾಪತ್ತೆಯಾಗಿರುವ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕಳುಹಿಸಿಕೊಟ್ಟಿದೆ. ಅದಕ್ಕೆ ಕಾಲಾವಕಾಶವಾಗಲಿಲ್ಲ. ಅದನ್ನು ನಾನು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ ಅವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರೆ ಸಾಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಗತ್ಯವಾಗಿ ತೆಗೆದುಕೊಳ್ಳುತ್ತೇನೆ.

PAPERS LAID ON THE TABLE

SECRETARY.—Sir, I beg to lay ;

"Eighth List of Unstarred Questions and Answers of First Session, Fifth List of Unstarred Questions and Answers of Second Session, Third List of Unstarred Questions and Answers of Third Session, Second List of Unstarred Questions and Answers of Fourth and Fifth Sessions." *

MR. DEPUTY SPEAKER.—Now we shall take up Calling Attention

CALLING ATTENTION TO MATTERS OF URGENT PUBLIC IMPORTANCE

re : Hardship caused to Milk Producers due to rise in cattle feeds and increasing the procurement rate of the Dairy Milk.

SRI ANDANAIAH.—Sir, I call the attention of the Ministers for Law, Parliamentary Affairs, Veterinary and Animal Husbandry to the hardship caused to Milk Producers due to rise in Cattle feeds and increasing the procurement rate of the Dairy Milk.

---

* Annexures.